# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಜನವರಿ ೧೩, ೨೦೨೦ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೦೨ನೇ ಸಭೆಯ ನಡವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೬. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೭. ಶ್ರೀ ಜೈಭೀಮ್, ಕಲಬುರಗಿ | : ಸದಸ್ಯರು |
| ೦೮. ಡಾ. ವೈ.ಎಂ. ಭಜಂತ್ರಿ | : ಸದಸ್ಯರು |
| ೦೯. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೧೧. ಡಾ. ವೀರೇಶ್ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಕೇಶವನ್ ಪ್ರಸಾದ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೪. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೫. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೬. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಗೆ ಸರ್ಕಾರದಿಂದ ನೂತನವಾಗಿ ನಾಮನಿರ್ದೇಶನಗೊಂಡ ಎಲ್ಲ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಕುಲಪತಿಗಳು ನೂತನವಾಗಿ ಕಾರ್ಯಕಾರಿ ಸಮಿತಿಗೆ ಆಯ್ಕೆಗೊಂಡ ಎಲ್ಲಾ ಸದಸ್ಯರನ್ನು ಅಭಿನಂದಿಸಿ ಸ್ವಾಗತಿಸಿದರು ಮತ್ತು ಕನ್ನಡ ವಿಶ್ವವಿದ್ಯಾಲಯದ ಆರಂಭದಿಂದ ಈವರೆಗೆ ಕಾರ್ಯನಿರ್ವಹಿಸಿದ ಎಲ್ಲ ಕುಲಪತಿಗಳ ಕಾರ್ಯವೈಖರಿ, ಆಶಯಗಳು, ಶೈಕ್ಷಣಿಕ ಪ್ರಗತಿ ಹಾಗೂ ಕಾರ್ಯಚಟುವಟಿಕೆಗಳನ್ನು ಪರಿಚಯಿಸಿದರು. ಮತ್ತು ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಆಶಯವನ್ನು ಈಡೇರಿಸಲು ಎಲ್ಲಾ ಸದಸ್ಯರೂ ಪ್ರಯತ್ನಿಸುವಂತೆ ಮನವಿ ಮಾಡಿದರು. ನಂತರ ನಾಡಿನ ಹೆಸರಾಂತ ಸಂಶೋಧಕರೂ, ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪುರಸ್ಕೃತರೂ ಆದ ಡಾ. ಎಂ. ಚಿದಾನಂದಮೂರ್ತಿ ಅವರ ಆತ್ಮಕ್ಕೆ ಶಾಂತಿ ಕೋರಿ ಸಭೆ ಸಂತಾಪಸೂಚಿಸಿತು.

**ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

ಅ. ಕಾರ್ಯಕಾರಿ ಸಮಿತಿ ಸದಸ್ಯರ ಮನವಿ ಹಿನ್ನೆಲೆಯಲ್ಲಿ ಇನ್ನುಮುಂದೆ ಕಾರ್ಯಸೂಚಿಗೆ ಸಂಬಂಧಿಸಿದ ಪೂರಕ ಮಾಹಿತಿಗಳನ್ನು ಕಾರ್ಯಸೂಚಿಯೊಂದಿಗೆ ಮುಂಚಿತವಾಗಿ ಕಳುಹಿಸಲು ಸಭೆ ತೀರ್ಮಾನಿಸಿತು.

ಆ. ವಿಶ್ವವಿದ್ಯಾಲಯದ ವಿಶೇಷ ಪ್ರಕರಣದ ವಿವರಗಳನ್ನು ಎಲ್ಲಾ ಸದಸ್ಯರಿಗೆ ನೀಡಲು ಸಭೆ ತೀರ್ಮಾನಿಸಿತು

ಇ. ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಪರಿನಿಯಮಗಳನ್ನು ನಿಯಮಾನುಸಾರ ಮರು ಮುದ್ರಿಸಲು ಸಭೆ ನಿರ್ಣಯಿಸಿತು

ವಿಷಯ : ದಿನಾಂಕ ೦೪.೧೦.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೧ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

ನಿರ್ಣಯ: ದಿನಾಂಕ ೦೪.೧೦.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೧ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಸಭೆ ಅನುಮೋದನೆ ನೀಡಿತು.

ವಿಷಯ : ದಿನಾಂಕ ೦೪.೧೦.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೧ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

ನಿರ್ಣಯ: ದಿನಾಂಕ ೦೪.೧೦.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೧ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸಭೆ ಅನುಮೋದನೆ ನೀಡಿತು.

೨೦೨.೦೧ ದಿನಾಂಕ ೧೨.೧೧.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿ ಅನುಮೋದನೆ ನೀಡಿತು.

ಅ. ಸದರಿ ನಡೆವಳಿಯ ವಿಷಯ ೪ರಲ್ಲಿನ ಅಂಶವನ್ನು ಸಭೆಯು ಮರುಪರಿಶೀಲಿಸಿ ವಸತಿಗೃಹದಲ್ಲಿ ವಾಸವಿದ್ದ ಅವಧಿಯ ಮೂವರು ಸಿಬ್ಬಂದಿಗಳಿಂದ ಮನೆಬಾಡಿಗೆ ಮೊತ್ತದ ಶೇ.೫೦% ರಷ್ಟನ್ನು ಸದರಿ ಸಿಬ್ಬಂದಿಗಳ ವೇತನದಲ್ಲಿ ಕಡಿತಗೊಳಿಸಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು ಹಾಗೂ ಇಂತಹ ಪ್ರಕರಣಗಳು ಮುಂದುವರಿಯದಂತೆ ಕ್ರಮವಹಿಸಲು ಸಭೆ ನಿರ್ಣಯಿಸಿತು.

ಆ. ಸದರಿ ನಡೆವಳಿಯ ವಿಷಯ ೫ರಲ್ಲಿನ ಅಂಶವನ್ನು ಸಭೆಯು ಮರುಪರಿಶೀಲಿಸಿ, ಭರತೇಶ ಶಿಕ್ಷಣ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳದೇ ಕೋರ್ಸ್ ಆರಂಭಿಸಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ, ನಿಯಮಾನುಸಾರ ಒಪ್ಪಂದವನ್ನು ಮಾಡಿಕೊಳ್ಳುವುದು. ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈವರೆಗೆ ನೋಂದಣಿಯಾದ ವಿದ್ಯಾರ್ಥಿಗಳ ಕೋರ್ಸ್ ಮುಗಿಯುವವರೆಗೆ ಮಾತ್ರ ಮುಂದುವರೆಸಿ ನಂತರ ಕೋರ್ಸ್‌ಗಳನ್ನು ಸ್ಥಗಿತಗೊಳಿಸಲು ತೀರ್ಮಾನಿಸಿ, ಇಂತಹ ಪ್ರಕರಣಗಳು ಮುಂದುವರಿಯದಂತೆ ಕ್ರಮವಹಿಸಲು ನಿರ್ಣಯಿಸಿತು.

ಇ. ವಿಸ್ತರಣಾ ಕೇಂದ್ರಗಳ ಕಟ್ಟಡ, ಅನುದಾನ, ಶೈಕ್ಷಣಿಕ ಮತ್ತು ವಿದ್ಯಾರ್ಥಿಗಳ ವಿವರಗಳನ್ನು ಎಲ್ಲಾ ನೂತನ ಸದಸ್ಯರಿಗೆ ಒದಗಿಸಲು ಸಭೆ ನಿರ್ಣಯಿಸಿತು.

೨೦೨.೦೨ ದಿನಾಂಕ ೨೫.೧೧.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೨.೦೩. ದಿನಾಂಕ ೧೭.೧೨.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೨.೦೪. ದಿನಾಂಕ ೧೯.೧೨.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೨.೦೫. ಪಿಎಚ್.ಡಿ. ಪದವಿಗೆ ಮಾರ್ಗದರ್ಶಕರನ್ನು ನೇಮಿಸುವ ಬಗೆಗೆ ಶ್ರೀ ಜೈಭೀಮ ಕಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು ಅವರು ದಿನಾಂಕ ೨೭.೧೨.೨೦೧೯ರಂದು ಸಲ್ಲಿಸಿರುವ ಪತ್ರದ ಕುರಿತು.

ನಿರ್ಣಯ : ಸದರಿ ವಿಷಯ ಕುರಿತಂತೆ ಸಭೆಯು ಸುದೀರ್ಘವಾಗಿ ಚರ್ಚಿಸಿತು. ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿ ಮತ್ತು ಮಾನ್ಯತಾ ಕೇಂದ್ರಗಳಲ್ಲಿ ಪಿಎಚ್.ಡಿ. ಮಾರ್ಗದರ್ಶಕರ(ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಗಳ)ನ್ನು ನಿಯೋಜಿಸಿರುವ ಕ್ರಮಗಳ ವಿವರಗಳನ್ನು ಕುಲಸಚಿವರು ಸಭೆಗೆ ಮಂಡಿಸಿದರು.

ಅಧ್ಯಯನ ವಿಭಾಗಗಳಲ್ಲಿ, ವಿಸ್ತರಣಾ ಕೇಂದ್ರಗಳಲ್ಲಿ ಮತ್ತು ಮಾನ್ಯತಾ ಕೇಂದ್ರಗಳಲ್ಲಿ ಮಾರ್ಗದರ್ಶನ ಮಾಡುತ್ತಿರುವ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಗಳ/ಮಾರ್ಗದರ್ಶಕರ ಅರ್ಹತೆ ಸಂಬಂಧಿಸಿದ ವಿವರಗಳನ್ನು ಎಲ್ಲಾ ಸದಸ್ಯರಿಗೆ ನೀಡಲು ಸಭೆ ತೀರ್ಮಾನಿಸಿತು.

ಬಾಹ್ಯ ಮಾರ್ಗದರ್ಶಕರನ್ನು ನೇಮಿಸಿಕೊಳ್ಳುವ ಬಗ್ಗೆ ಮರುಪರಿಶೀಲಿಸುವಂತೆ ಯು.ಜಿ.ಸಿ ಮತ್ತು ರಾಜ್ಯ ಸರ್ಕಾರಗಳಿಗೆ ಮನವರಿಕೆ ಮಾಡಿ ಅನುಮತಿ ಪಡೆಯುವ ಬಗ್ಗೆ ಪತ್ರವನ್ನು ಬರೆದು ಸೂಕ್ತ ಕ್ರಮಕೈಗೊಳ್ಳಲು ಸಭೆ ನಿರ್ಣಯಿಸಿತು.

೨೦೨. ೦೬ ಯೋಗ ಡಿಪ್ಲೊಮ ಮತ್ತು ಯೋಗ ಸರ್ಟಿಫಿಕೇಟ್ ಕೋರ್ಸ್‌ಗಳ ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗುತ್ತಿರುವ (ಗಂಟೆಗೆ ರೂ. ೩೭೫/-ರಂತೆ ಮಾಸಿಕ ೧೬ ಗಂಟೆಗೆ) ರೂ. ೬,೦೦೦/-ಗಳ ಗೌರವ ಸಂಭಾವನೆಯನ್ನು (ಮಾಸಿಕ ೩೨ ಗಂಟೆಗಳಿಗೆ) ಪರಿಷ್ಕರಿಸಿ ಮಾಸಿಕ ರೂ. ೧೨,೦೦೦/-ಗಳಿಗೆ ಹೆಚ್ಚಿಸುವ ಸಂಬಂಧ ಯೋಗ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಎಫ್.ಟಿ. ಹಳ್ಳಿಕೇರಿ ಇವರು ದಿನಾಂಕ ೧೨.೧೨.೨೦೧೯ರಂದು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಯೋಗ ಡಿಪ್ಲೊಮ ಮತ್ತು ಯೋಗ ಸರ್ಟಿಫಿಕೇಟ್ ಕೋರ್ಸ್‌ಗಳ ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗುತ್ತಿರುವ (ಗಂಟೆಗೆ ರೂ. ೩೭೫/-ರಂತೆ ಮಾಸಿಕ ೧೬ ಗಂಟೆಗೆ) ರೂ. ೬,೦೦೦/-ಗಳ ಗೌರವ ಸಂಭಾವನೆಯನ್ನು (ಗಂಟೆಗೆ ರೂ. ೩೭೫/-ರಂತೆ ಮಾಸಿಕ ೩೨ ಗಂಟೆಗಳಿಗೆ) ರೂ. ೧೨,೦೦೦/-ಗಳಿಗೆ ಮೀರದಂತೆ ದಿನಾಂಕ ೦೩.೦೯.೨೦೧೯ರಿಂದ ಅನ್ವಯವಾಗುವಂತೆ ಹೆಚ್ಚಿಸಲು ಸಭೆ ಅನುಮೋದನೆ ನೀಡಿತು.

೨೦೨. ೦೭ ೨೦೨೦ ಫೆಬ್ರವರಿ ೬ ರಂದು ನಡೆಯಲಿರುವ ಕನ್ನಡ ವಿಶ್ವವಿದ್ಯಾಲಯದ ಯೋಗ ಅಧ್ಯಯನ ಕೇಂದ್ರದ ಕಟ್ಟಡದ ಶಂಕುಸ್ಥಾಪನೆಯ ಸಮಾರಂಭಕ್ಕೆ ಹರಿದ್ವಾರದ ಪತಂಜಲಿ ಯೋಗ ಪೀಠದ ಅಧ್ಯಕ್ಷರಾದ ಯೋಗಋಷಿ ರಾಮದೇವಜೀ ಮಹಾರಾಜ ಅವರನ್ನು ಆಹ್ವಾನಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತಂತೆ ಸುದೀರ್ಘವಾಗಿ ಚರ್ಚಿಸಿ ಯೋಗ ಅಧ್ಯಯನ ಕೇಂದ್ರ ಕಟ್ಟಡ ನಿರ್ಮಾಣದ ಪ್ರಸ್ತಾವನೆ ಮತ್ತು ಅನುದಾನದ ವಿವರಗಳನ್ನು ಸಿದ್ಧಪಡಿಸಿ ಸೂಕ್ತ ಪ್ರಾಧಿಕಾರಿಗಳ ಅನುಮೋದನೆಯನ್ನು ಪಡೆಯುವವರೆಗೆ ಸದರಿ ಶಂಕುಸ್ಥಾಪನೆ ಸಮಾರಂಭವನ್ನು ಮುಂದೂಡಲು ಸಭೆ ನಿರ್ಣಯಿಸಿತು.

೨೦೦. ೦೮ ಡಾ. ಜಯದೇವಿ ಜಂಗಮಶೆಟ್ಟಿ, ಸಹಾಯಕ ಪ್ರಾಧ್ಯಾಪಕರು, ಸಂಗೀತ ಮತ್ತು ನೃತ್ಯ ವಿಭಾಗ ಇವರು ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಸಂಗೀತ ಮತ್ತು ದೃಶ್ಯಕಲೆ ವಿಭಾಗದ ಸಹಾಯಕ ಪ್ರಾಧ್ಯಾಪಕಿಯಾಗಿ ನೇಮಕಗೊಂಡಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಎರಡು ವರ್ಷಗಳ ಲೀನ್ ಮೇಲೆ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಲೀನ್ ಮೇಲೆ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮವನ್ನು ಸಭೆಯು ಪರಿಶೀಲಿಸಿ, ಸದರಿ ಸಿಬ್ಬಂದಿಯನ್ನು ಅಲ್ಲಿಯೇ ವಿಲೀನಗೊಳ್ಳುವಂತೆ ಸೂಚಿಸಿ ಪತ್ರವನ್ನು ಬರೆಯುವುದು ಅಥವಾ ಲೀನ್ ಮೇಲೆ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಅವರ ಸೇವೆಯನ್ನು ವಿಶ್ವವಿದ್ಯಾಲಯಕ್ಕೆ ಹಿಂಪಡೆಯಲು ಕ್ರಮವಹಿಸುವುದು. ಈ ಕುರಿತು ಸದರಿ ಸಿಬ್ಬಂದಿಯವರಿಗೆ ಪತ್ರ ಬರೆದು ಅವರ ಸ್ಪಷ್ಟನೆಯನ್ನು ಪಡೆದು ನಿಯಮಾನುಸಾರ ಕ್ರಮವಹಿಸಲು ಸಭೆ ತೀರ್ಮಾನಿಸಿತು.

೨೦೨. ೦೯ ರಾಣೆಬೆನ್ನೂರಿನ ನಾಗಶಾಂತಿ ವಿದ್ಯಾಸಂಸ್ಥೆ ಇವರು ೨೦೨೦ ಜನವರಿ ೧೭, ೧೮ ಮತ್ತು ೧೯ರಂದು ಆಯೋಜಿಸಿರುವ "ಕರ್ನಾಟಕ ವೈಭವ ವೈಚಾರಿಕ ಹಬ್ಬ"ದ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದಿಂದ ರೂ. ೨.೦೦ ಲಕ್ಷಗಳ ಆರ್ಥಿಕ ನೆರವು ಕೋರಿ ಸದರಿ ಸಂಸ್ಥೆಯವರು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸದ್ಯ ವಿಶ್ವವಿದ್ಯಾಲಯದ ಪ್ರತಿನಿಧಿಗಳಾಗಿ ಭಾಗವಹಿಸುವ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಪ್ರಯಾಣ ವೆಚ್ಚಗಳನ್ನು ಭರಿಸುವ ಮೂಲಕ ಸದರಿ ಕಾರ್ಯಕ್ರಮಕ್ಕೆ ನೆರವು ನೀಡಲು ಸಭೆ ಅನುಮೋದನೆ ನೀಡಿತು.

೨೦೨. ೧೦ ದಿ ಕರ್ನಾಟಕ ಹಿಸ್ಟರಿ ಕಾಂಗ್ರೆಸ್ (ರಿ), ಬೆಂಗಳೂರು ಇದರ ಪ್ರಧಾನ ಕಾರ್ಯದರ್ಶಿಗಳು ಕನ್ನಡ ವಿಶ್ವವಿದ್ಯಾಲಯದ ಆಶ್ರಯದಲ್ಲಿ ೨೯ನೆಯ ಕರ್ನಾಟಕ ಇತಿಹಾಸ ಕಾಂಗ್ರೆಸ್ ಸಮ್ಮೇಳನವನ್ನು ಆಯೋಜಿಸಲು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ದಿ ಕರ್ನಾಟಕ ಹಿಸ್ಟರಿ ಕಾಂಗ್ರೆಸ್ (ರಿ), ಬೆಂಗಳೂರು, ಇವರು ಕನ್ನಡ ವಿಶ್ವವಿದ್ಯಾಲಯದ ಆಶ್ರಯದಲ್ಲಿ ವಿದ್ಯಾರಣ್ಯ ಆವರಣದಲ್ಲಿ ೨೯ನೆಯ ಕರ್ನಾಟಕ ಇತಿಹಾಸ ಕಾಂಗ್ರೆಸ್ ಸಮ್ಮೇಳನವನ್ನು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗದಂತೆ ಆಯೋಜಿಸಲು ಸಭೆ ಅನುಮೋದನೆ ನೀಡಿತು.

೨೦೨. ೧೧ ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾಗಿರುವ ವಿವಿಧ ದತ್ತಿನಿಧಿಗಳ ದತ್ತಿ ಹಣವನ್ನು ಕನಿಷ್ಟ ರೂ. ೫.೦೦ ಲಕ್ಷಗಳಿಗೆ ಹೆಚ್ಚಿಸುವಂತೆ ದತ್ತಿದಾನಿಗಳಿಗೆ ಮನವಿ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ವಿವಿಧ ದತ್ತಿನಿಧಿಗಳ ದತ್ತಿ ಹಣವನ್ನು ಕನಿಷ್ಟ ರೂ. ೫.೦೦ ಲಕ್ಷಗಳಿಗೆ ಹೆಚ್ಚಿಸುವಂತೆ ದತ್ತಿದಾನಿಗಳಿಗೆ ಮನವಿಯನ್ನು ಸಲ್ಲಿಸಲು ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೦೨. ೧೨ ಬೋಧಕ ಸಿಬ್ಬಂದಿಗಳಾದ ಡಾ. ಎಲ್. ಶ್ರೀನಿವಾಸ, ಡಾ. ತಾರೀಹಳ್ಳಿ ಹನುಮಂತಪ್ಪ, ಡಾ. ಜನಾರ್ದನ, ಡಾ. ಎಸ್.ವೈ. ಸೋಮಶೇಖರ್, ಡಾ. ಮಲ್ಲಿಕಾರ್ಜುನ ಗೌಡ, ಡಾ. ಸುಚೇತ ನವರತ್ನ ಇವರುಗಳು ಸಿಎಎಸ್ ಬಡ್ತಿ ಕೋರಿ ಮನವಿ

ಸಲ್ಲಿಸಿದ್ದು, ಯುಜಿಸಿ ೨೦೧೮ ನಿಯಮಾನುಸಾರ ಸಿಎಎಸ್ ಪ್ರಕ್ರಿಯೆ ಕೈಗೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ನಿಯಮಾನುಸಾರ ಸಿಎಎಸ್ ಪ್ರಕ್ರಿಯೆ ಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೨೦೨. ೧೩ ಶ್ರೀಮತಿ ರೇಣುಕಮ್ಮ ಗಂಡ ದಿವಂಗತ ಶ್ರೀ ಹನುಮಂತರಾಯ ಇವರು ತಮ್ಮ ಮಗನಾದ ಶ್ರೀ ಗಂಗಾಧರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ೧೦.೧೦.೨೦೧೯ರಂದು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಕಂಪದ ನೇಮಕಾತಿ ಕೋರಿರುವ ವ್ಯಕ್ತಿಯ ಸಂಪೂರ್ಣ ವಿವರಗಳನ್ನು ಮತ್ತು ಯಾವುದಾದರೂ ಪ್ರಕರಣಗಳು ದಾಖಲಾಗಿವೆಯೇ ಎಂಬ ಮಾಹಿತಿಯನ್ನು ಸಂಗ್ರಹಿಸಿ ಅಗತ್ಯ ದಾಖಲೆಗಳೊಂದಿಗೆ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಸಭೆ ತೀರ್ಮಾನಿಸಿತು.

೨೦೨. ೧೪ ಶ್ರೀಮತಿ ಬಿ. ಲಲಿತ, ಗಂಡ ದಿವಂಗತ ಶ್ರೀ ಬಿ. ರಾಮಕೃಷ್ಣ ಇವರು ತಮ್ಮ ಮಗನಾದ ಶ್ರೀ ಬಿ.ಆರ್. ವಿವೇಕ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ೩೦.೧೨.೨೦೧೯ರಂದು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಕಂಪದ ನೇಮಕಾತಿ ಕೋರಿರುವ ವ್ಯಕ್ತಿಯ ಸಂಪೂರ್ಣ ವಿವರಗಳನ್ನು ಮತ್ತು ಯಾವುದಾದರೂ ಪ್ರಕರಣಗಳು ದಾಖಲಾಗಿವೆಯೇ ಎಂಬ ಮಾಹಿತಿಯನ್ನು ಸಂಗ್ರಹಿಸಿ ಅಗತ್ಯ ದಾಖಲೆಗಳೊಂದಿಗೆ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಸಭೆ ತೀರ್ಮಾನಿಸಿತು.

೨೦೨. ೧೫ ಶ್ರೀ ಬಿ. ರಾಮಕೃಷ್ಣ ಇವರಿಗೆ ವೈದ್ಯಕೀಯ ವೆಚ್ಚ ಪಾವತಿಸಿದ ರೂ. ೧,೦೦,೦೦೦-೦೦ (ಒಂದು ಲಕ್ಷ ರೂ.)ಗಳಿಗೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೨. ೧೬ ಶ್ರೀ ಸುಜ್ಞಾನಮೂರ್ತಿ, ಉಪ ನಿರ್ದೇಶಕರು, ಪ್ರಸಾರಾಂಗ ಇವರ ಹಾಗೂ ಇವರ ಪತ್ನಿಯ ವೈದ್ಯಕೀಯ ವೆಚ್ಚದ ಮೊತ್ತ ರೂ. ೩,೮೩,೨೧೩-೦೦ಗಳನ್ನು ಮರುಪಾವತಿಸಲು ಕೋರಿ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದಲ್ಲಿ ಸಿ.ಜಿ.ಎಸ್.(ಆರೋಗ್ಯ ಭಾರತಿ)ನಿಯಮಗಳನ್ನು ಅಳವಡಿಸಿಕೊಳ್ಳಲು ಸೂಚಿಸಿತು ಹಾಗೂ ವೈದ್ಯಕೀಯ ವೆಚ್ಚಗಳ ಪಾವತಿ ಸಂಬಂಧಪಟ್ಟಂತೆ ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆ ತೀರ್ಮಾನಿಸಿತು.

೨೦೨. ೧೭ ಶ್ರೀ ಆರ್.ವಿ. ದೇಶಪಾಂಡೆ, ಕಿರಿಯ ಸಹಾಯಕ ಇವರ ವೈದ್ಯಕೀಯ (ಲಘು ಹೃದಯಾಘಾತದ) ವೆಚ್ಚದ ಮೊತ್ತ ರೂ. ೧,೧೭,೭೫೫-೦೦ಗಳನ್ನು ಮರುಪಾವತಿಸಲು ಕೋರಿ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದಲ್ಲಿ ಸಿ.ಜಿ.ಎಸ್.(ಆರೋಗ್ಯ ಭಾರತಿ)ನಿಯಮಗಳನ್ನು ಅಳವಡಿಸಿಕೊಳ್ಳಲು ಸೂಚಿಸಿತು ಹಾಗೂ ವೈದ್ಯಕೀಯ ವೆಚ್ಚಗಳ ಪಾವತಿ ಸಂಬಂಧಪಟ್ಟಂತೆ ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆ ತೀರ್ಮಾನಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೦೨. ೧೮ ನುಡಿಹಬ್ಬ ೨೮ರ ಘಟಿಕೋತ್ಸವದ ಭಾಷಣಕಾರರನ್ನು ಆಹ್ವಾನಿಸುವ ಕುರಿತು.

ನಿರ್ಣಯ : ಡಾ. ವೆಂಕಟಾಚಲ ಶಾಸ್ತ್ರಿ, ಡಾ. ವೆಂಕಟಸುಬ್ಬಯ್ಯ, ಡಾ. ಕಸ್ತೂರಿ ರಂಗನ್ ಮುಂತಾದ ವಿದ್ವಾಂಸರಲ್ಲಿ ಸೂಕ್ತರಾದವರನ್ನು ಮಾನ್ಯ ಕುಲಪತಿಗಳೇ ಆಯ್ಕೆ ಮಾಡಬಹುದೆಂದು ಸಭೆ ನಿರ್ಣಯಿಸಿತು.

೨೦೨. ೧೯ ನುಡಿಹಬ್ಬ ೨೮ರ ನಾಡೋಜ ಆಯ್ಕೆ ಸಮಿತಿ ರಚನೆಗೆ ಹಾಗೂ ಸದರಿ ಸಮಿತಿಗೆ ಕನ್ನಡ ವಿಶ್ವವಿದ್ಯಾಲಯದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡುವ ಕುರಿತು.

ನಿರ್ಣಯ : ನುಡಿಹಬ್ಬ ೨೮ರ ನಾಡೋಜ ಆಯ್ಕೆ ಸಮಿತಿ ರಚಿಸಲು ಹಾಗೂ ಸದರಿ ಸಮಿತಿಗೆ ಡಾ. ರಂಗನಾಥ, (ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು) ಅಥವಾ ಡಾ. ಎಂ.ಕೆ.ಶ್ರೀಧರ ಅವರನ್ನು ವಿಶ್ವವಿದ್ಯಾಲಯದ ಪ್ರತಿನಿಧಿ/ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಭೆ ಅನುಮೋದನೆ ನೀಡಿತು.

೨೦೨. ೨೦ ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ವೃಂದದಲ್ಲಿ (ಹೈದ್ರಾಬಾದ್-ಕರ್ನಾಟಕ ೩೭೧ ಜೆ) ಲಭ್ಯವಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

ನಿರ್ಣಯ : ಸರ್ಕಾರದ ಆಯವ್ಯಯ ಹಂಚಿಕೆ ಪ್ರಕ್ರಿಯೆಗಳನ್ನು ಗಮನದಲ್ಲಿಟ್ಟುಕೊಂಡು ಜುಲೈ-೨೦೨೦ರ ಒಳಗಾಗಿ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆನ್ನು ಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೨೦೨. ೨೧ ದಿನಾಂಕ ೩೦.೦೭.೨೦೧೯ರಂದು ನಡೆದ ೨೦೧೮-೧೯ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೨. ೨೨ ದಿನಾಂಕ ೦೪.೧೦.೨೦೧೯ರಂದು ನಡೆದ ೨೦೧೯-೨೦ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೨. ೨೩ ಶ್ರೀಮತಿ ಎಸ್. ಪದ್ಮಾವತಿ ಗಂಡ ದಿವಂಗತ ಶ್ರೀ ಸೋಮಶೇಖರ ಇವರು ತಮಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ೦೨.೦೧.೨೦೨೦ರಂದು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಕಂಪದ ನೇಮಕಾತಿ ಕೋರಿರುವ ವ್ಯಕ್ತಿಯ ಸಂಪೂರ್ಣ ವಿವರಗಳನ್ನು ಮತ್ತು ಯಾವುದಾದರೂ ಪ್ರಕರಣಗಳು ದಾಖಲಾಗಿವೆಯೇ ಎಂಬ ಮಾಹಿತಿಯನ್ನು ಸಂಗ್ರಹಿಸಿ ಅಗತ್ಯ ದಾಖಲೆಗಳೊಂದಿಗೆ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಸಭೆ ತೀರ್ಮಾನಿಸಿತು.

೨೦೨. ೨೪ ಕನ್ನಡ ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳಿಗೆ ನೋಂದಣಿ ಪೂರ್ವದಲ್ಲಿ ವಿದ್ಯಾರ್ಥಿಗಳು ಮತ್ತು ಅವರ ಪಾಲಕರು/ಪೋಷಕರು ಸಲ್ಲಿಸಬೇಕಾದ ದೃಢೀಕರಣ ಪತ್ರ ಕರಡು ಪ್ರತಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತಿಲ್ಲ ಎಂಬ ಅಂಶವನ್ನು ಮತ್ತು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮದ ಅನುಚ್ಛೇದ ೬(ಸಿ)ಗೆ ಬದ್ಧರಾಗಿರಬೇಕೆಂಬುದನ್ನು ಸೇರಿಸಿ ಕರಡು ಪ್ರತಿಗೆ ಸಭೆ ಅನುಮೋದನೆ ನೀಡಿತು.

೨೦೨. ೨೫ ದಿನಾಂಕ ೧೦.೦೧.೨೦೨೦ರಂದು ನಡೆದ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಅನುಶಾಸನ ರಚನಾ ಸಲಹಾ ಸಮಿತಿ ನಡಾವಳಿಗಳಿಗೆ ಹಾಗೂ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಅನುಶಾಸನಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಅನುಶಾಸನ ರಚನಾ ಸಲಹಾ ಸಮಿತಿ ನಡಾವಳಿಗಳಿಗೆ ಹಾಗೂ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಅನುಶಾಸನಗಳಿಗೆ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೦೨. ೨೬ ದಿನಾಂಕ ೧೦.೦೧.೨೦೨೦ರಂದು ನಡೆದ ಎಂ.ಎ. ಪಿಎಚ್.ಡಿ. ಸಮಾಜಶಾಸ್ತ್ರ ಸಂಯೋಜಿತ ಪದವಿಯ ಅಧ್ಯಯನ ಮಂಡಳಿ ಸಭೆಯ ನಡಾವಳಿಗಳಿಗೆ ಹಾಗೂ ಪಿಎಚ್.ಡಿ. ಸಮಾಜಶಾಸ್ತ್ರ ಕೋರ್ಸ್‌ವರ್ಕ್ ಪಠ್ಯಕ್ರಮಕ್ಕೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸಮಾಜಶಾಸ್ತ್ರ ಎಂ.ಎ., ಪಿಎಚ್.ಡಿ. ಸಂಯೋಜಿತ ಪದವಿಯ ಅಧ್ಯಯನ ಮಂಡಳಿ ಸಭೆಯ ನಡಾವಳಿಗಳಿಗೆ ಹಾಗೂ ಪಿಎಚ್.ಡಿ. ಸಮಾಜಶಾಸ್ತ್ರ ಕೋರ್ಸ್‌ವರ್ಕ್ ಪಠ್ಯಕ್ರಮಕ್ಕೆ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೦೨. ೨೭ ದಿನಾಂಕ ೧೩.೦೧.೨೦೨೦ರಂದು ನಡೆದ ಕೌಶಲ್ಯಾಭಿವೃದ್ಧಿ ಕೇಂದ್ರದ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಕೌಶಲ್ಯಾಭಿವೃದ್ಧಿ ಕೇಂದ್ರದ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಸಭೆ ಅನುಮೋದನೆ ನೀಡಿತು.

೨೦೨. ೨೮ ವಿಶ್ವವಿದ್ಯಾಲಯದ ಅಧ್ಯಾಪಕರು ಹೆಚ್ಚಿನ ಪ್ರಮಾಣದಲ್ಲಿ ಯು.ಜಿ.ಸಿ., ಐ.ಸಿ.ಎಸ್.ಎಸ್.ಆರ್., ಐ.ಸಿ.ಎಚ್.ಆರ್. ಮುಂತಾದ ಸಂಸ್ಥೆಗಳಿಂದ ಅನುದಾನಗಳನ್ನು ಪಡೆದು ಯೋಜನೆಗಳನ್ನು ಕೈಗೊಳ್ಳುವ ಬಗೆಗೆ.

ನಿರ್ಣಯ : ವಿಶ್ವವಿದ್ಯಾಲೆಯಕ್ಕೆ ಸರ್ಕಾರದಿಂದ ಲಭ್ಯವಿರುವ ಅನುದಾನಗಳ ಕೊರತೆಯ ಹಿನ್ನೆಲೆಯಲ್ಲಿ ಅಧ್ಯಾಪಕರು ಯು.ಜಿ.ಸಿ., ಐ.ಸಿ.ಎಸ್.ಎಸ್.ಆರ್., ಐ.ಸಿ.ಎಚ್.ಆರ್. ಮುಂತಾದ ಸಂಸ್ಥೆಗಳಿಗೆ ಯೋಜನಾ ಪ್ರಸ್ತಾವಗಳನ್ನು ಸಲ್ಲಿಸಿ ಅನುದಾನಗಳನ್ನು ಪಡೆದು ಅಧ್ಯಯನ ಯೋಜನೆಗಳನ್ನು ಕೈಗೊಳ್ಳುವುದು ಸೂಕ್ತವೆಂದು ಸಭೆ ತೀರ್ಮಾನಿಸಿತು.

೨೦೨. ೨೯ ಮೆಡಿಕಲ್ ಲಿಟರೇಚರ್‌ನ್ನು ಕನ್ನಡಕ್ಕೆ ಭಾಷಾಂತರಿಸುವ ಯೋಜನೆಗೆ ಸಂಬಂಧಿಸಿದ ಪ್ರಸ್ತಾವ ಕುರಿತು.

ನಿರ್ಣಯ : ಸದರಿ ವಿಷಯ ಕುರಿತಂತೆ ಕರ್ನಾಟಕ ರಾಜ್ಯ ವೈದ್ಯಕೀಯ ವಿಶ್ವವಿದ್ಯಾಲಯದಿಂದ ಅಧಿಕೃತ ಪ್ರಸ್ತಾವ ಬಂದ ನಂತರ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಸಭೆ ನಿರ್ಣಯಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು